ನೆಟ್ಟಿದ್ದವು. ಮೃದುದನಿಯಲ್ಲೇ ಮಾತು ಹೊರಟಿತು: "ಎಲ್ಲರಿಗೂ ಒಂದೇ ಲೋಕವಿರುವ ಅಲ್ಲಿಂದ ಒಬ್ಬೊಬ್ಬರಿಗೂ ಒಂದೊಂದು ಲೋಕವಿರುವ ಇಲ್ಲಿಗೆ ಬರುವ ಆತ್ಮಗಳಿಗೆ ಎಲ್ಲರೂ ಇದ್ದೂ ಒಂಟಿತನ ಕಟ್ಟಿಟ್ಟದ್ದು. ಇದಕ್ಕೆ ನೀನೂ ಹೊರತಲ್ಲ. ಆದಾಗ್ಯೂ ಅವರವರ ಲೋಕಗಳನ್ನು ಒಂದಾಗಿಸಿಕೊಳ್ಳುವ ಅವಕಾಶ ಎಲ್ಲರಿಗೂ ಇದ್ದೇ ಇರುತ್ತದೆ. ಇದಕ್ಕೂ ನೀನು ಹೊರತಲ್ಲ. ಆದರೆ, ಒಂದಾಗಿಸಿಕೊಳ್ಳುವ ಪ್ರಕ್ರಿಯೆ ವೇಗವನ್ನು ನಿರ್ಧರಿಸುವುದು ನಿನ್ನ ಮೂಲದೊಂದಿಗೆ ನೀನಿನ್ನೂ ಉಳಿಸಿಕೊಂಡಿರುವ ಬಾಂಧವ್ಯದ ಗಾಢತೆಯ ಮೇಲೆ ಅವಲಂಬಿಸಿರುತ್ತದೆ. ಅದು ಮಾತ್ರ ಎಲ್ಲರಿಗೂ ಅವರವರದೇ ಆಗಿರುತ್ತದೆ. ನಿನಗೂ ಅಷ್ಟೇ." ವಿಶಾಲವಾಗಿ ನಕ್ಕ. ಆ ಮಾತಿನ ಅರ್ಥವನ್ನು ಗ್ರಹಿಸಲು ನಾನು ಪ್ರಯತ್ನಿಸಿದೆ. ಏನೇನೋ ನೆನಪಾಗಿ ಗೊಂದಲವೆನಿಸತೊಡಗಿತು. ವಿಷಯ ನಿಚ್ಚಳವಾಗಲು ಸ್ವಲ್ಪ ಸಮಯ ಬೇಕು, ಆತುರ ಬೇಡ ಅನಿಸಿತು. ಆತುರಗೆಟ್ಟೇ ಇದುವರೆಗೆ ನಾನು ಎಲ್ಲವನ್ನೂ ಪಡೆದುಕೊಳ್ಳಲಾಗದೇ ಹೋಗಿರುವುದು ಎಂದೂ ಅನಿಸಿತು. ಇದು ತಾನಾಗಿಯೇ ನನಗನಿಸಿತೇ ಅಥವಾ ಯಾರೋ ನನಗಿದನ್ನು ಹೇಳಿದರೇ ಎಂದೆನಿಸಿ ಕಣ್ಣುಕಣ್ಣು ಬಿಟ್ಟೆ. ವೃದ್ಧನ ನಗೆ ನಿಂತು ಮುಖ ಗಂಭೀರವಾಯಿತು. ಈ ಮುಖವನ್ನೆಲ್ಲೋ ನೋಡಿದ್ದೇನೆ ಎಂದೆನಿಸುತ್ತಿದ್ದಂತೇ ಅವನಿಂದ ಮೃದು ಗಂಭೀರ ದನಿ ನಿಧಾನವಾಗಿ ಹೊರಟಿತು: "ಇದು ಮನುಷ್ಯ ನಾಗರಿಕನಾದ ನೆಲ. ಇಲ್ಲಿನ ಮಣ್ಣಿನಲ್ಲಿ, ನೀರಿನಲ್ಲಿ, ಗಾಳಿಯಲ್ಲಿ ಬದುಕು ಬೆರೆತುಹೋಗಿದೆ. ಇಲ್ಲಿ ಜ್ಞಾನ ನೀಡುವ ಗುರು ನಿನ್ನನ್ನು ಹುಡುಕಿಕೊಂಡು ಬರುತ್ತಾನೆ, ಹೋದಲ್ಲಿ ಬಂದಲ್ಲಿ ಕಾಲುಗಳಿಗಂಟಿಕೊಂಡು ಬರುವ ಗೆಳೆಯ ನಿನಗಿಲ್ಲಿಯೇ ಜತೆಯಾಗುತ್ತಾನೆ. ನೀ ಗೋಡೆ ಕಟ್ಟ ಮಾಡು ಎಬ್ಬಿಸಿದರೆ ಸಾಕು ಅದನ್ನು ಗೃಹವಾಗಿಸುವ, ನೀ ಇಟ್ಟಿಗೆಯಿಟ್ಟು ಒಲೆ ಕಟ್ಟಿಕೊಟ್ಟರೆ ಸಾಕು ನಿನ್ನಿಷ್ಟದ ಅಡಿಗೆ ಅಟ್ಟು ಬಡಿಸುವ, ನೀ ಕೂಡಿದರೆ ಸಾಕು ನಿನ್ನ ವಂಶದ ಕುಡಿಯನ್ನು ತನ್ನೊಡಲಲ್ಲಿ ಹೊತ್ತು ಹೆತ್ತು ನಿನ್ನ ಕೈಲಿಡುವ ಬಾಳಸಂಗಾತಿ ನಿನಗಿಲ್ಲಿ ಜತೆಯಾಗುತ್ತಾಳೆ. ನೀನು ತಲುಪಲೇಬೇಕಾಗಿದ್ದ ಸ್ಥಳ ಇದು. ನೇರವಾಗಿ ತಲುಪದೇ ಅಲ್ಲೆಲ್ಲಾ ಅಲೆದದ್ದು, ಸಾವಿನೊಂದಿಗೆ ಸೆಣಸಿದ್ದು ಯಾಕೆ ಎಂದು ಚಿಂತಿಸಬೇಡ. ಇದಾಗಬೇಕಾದ್ದೇ ಹೀಗೆ. ಬೆಂಕಿ ಸುಡುತ್ತದೆ ಎಂದು ಪ್ರತಿಯೊಂದು ತಲೆಮಾರೂ ಸ್ವಂತ ಅನುಭವದಿಂದಲೇ ಅರಿತುಕೊಳ್ಳಬೇಕು ಎಂಬ ಮಾತು ಕೇಳಿದ್ದೀಯಾ? ಹಾಗೇ ಒಂದು ತಲೆಮಾರಿನ ಸಂಕೋಲೆ ಮತ್ತು ಅದಕ್ಕಂಟಿದ ವಿಷ, ಶಬ್ದ ಮತ್ತು ಅದಕ್ಕಂಟಿದ ಇರಿತ, ಕಾಟ ಮತ್ತು ಅದಕ್ಕಂಟಿದ ಉರಿತದ ಅನುಭವಗಳು ಇನ್ನೊಂದು ತಲೆಮಾರಿಗೆ, ಒಂದು ಜನ್ಮದ ನೆನಪುಗಳು ಇನ್ನೊಂದು ಜನ್ಮಕ್ಕೆ ತನ್ನಿಂತಾನೇ ದಾಟಿ ಬರುವುದಿಲ್ಲ. ಪ್ರತಿ ತಲೆಮಾರೂ ಅವೆಲ್ಲವನ್ನೂ ಸ್ವತಃ ಅನುಭವಿಸಬೇಕು, ಆ ಅನುಭವ ಮಾನವನಿಗೆ ಪ್ರತಿಯೊಂದು ಜನ್ಮದಲ್ಲೂ ಪಾಠವಾಗಬೇಕು. ಇದೆಲ್ಲವೂ ಮನುಕುಲದ ಜಾತಕದಲ್ಲಿ ಎಂದೋ ದಾಖಲಾಗಿಹೋಗಿದೆ." ಅದ್ಭುತ ಅನಿಸಿತು. ಆದರೂ ಅನುಮಾನ. ಕೇಳಿಯೇಬಿಟ್ಟೆ: "ಅಷ್ಟು ಜನರಿದ್ದರಲ್ಲ! ಅದೆಲ್ಲಿ ಹೊದರು?"

ಅವನು ನಕ್ಕುಬಿಟ್ಟ. "ನಿನಗೆ ಬದುಕಿನ ಗುರುತು ಮಾಡಿಸಲು ಅಷ್ಟು ಜನರನ್ನು ನಾನಿಲ್ಲಿ ಒಟ್ಟುಗೂಡಿಸಬೇಕಾಯಿತು. ಕೆಲಸವಾದ ಮೇಲೆ ಅವರನ್ನೆಲ್ಲಾ ಕಳಿಸಿಬಿಟ್ಟೆ. ಮುಂದೆ ನಿನಗೆ ಬೇಕಾದಾಗ, ಬೇಕಾದಷ್ಟು ಸಂಖ್ಯೆಯಲ್ಲಿ, ಬೇಕಾದ ಸಂಬಂಧದಲ್ಲಿ ಅವರು ನಿನಗೆ ಸಿಗುತ್ತಾರೆ."

ನನ್ನೆದೆಯಲ್ಲಿ ಪ್ರಶ್ನೆ. ಇವನು ಯಾರು? ಸೋತಿದ್ದುದು ನನ್ನ ಕಾಲುಗಳು, ನಾಲಿಗೆ ಅಲ್ಲ. ಕೇಳಿಯೇಬಿಟ್ಟೆ. ಅವನು ನಕ್ಕುಬಿಟ್ಟ. ನಗುತ್ತಲೇ ನನ್ನತ್ತ ಸರಿದ. ಕುಳಿತಿದ್ದ ನನ್ನ ಮೇಲೆ ಬಾಗಿದ. ನನ್ನ ಮುಂದಲೆಗೆ ತನ್ನ ಹಣೆ ಹಚ್ಚಿದ. ಹಾಗೇ ನನ್ನ ತಲೆಯೊಳಗೆ ಇಳಿದುಬಿಟ್ಟ. ನನ್ನಲ್ಲಿ ಸೇರಿಹೋದ.

ನಾನು ಆಕಾಶಕ್ಕೆ ತಲೆಯೆತ್ತಿದೆ, ದೀರ್ಘವಾಗಿ ಉಸಿರ್ಗರೆದೆ, ಎದ್ದು ನಿಂತೆ. ಅನುಮಾನಿಸುತ್ತಾ ಒಂದು ಹೆಜ್ಜೆಯಿಟ್ಟೆ. ನೆಲ ನಕ್ಕಿತು. ನನಗೂ ನಗೆ. ಕುಣಿದಾಡಿದೆ. ನಿಂತೆ. ಕಣ್ಣೆದುರಿಗಿದ್ದ ದಿಕ್ಕಿಗೆ ಒಂದು ಹೆಜ್ಜೆಯಿಟ್ಟೆ.

ಸುತ್ತಲೂ ಇರುವ ಬದುಕಿಗೆ ಎತ್ತಲಿಂದಾದರೂ ಹೊರಡಬಹುದು.

ನಡೆಯುತ್ತಾ ಹೋದೆ. ಒಮ್ಮೆ ಬಲಕ್ಕೆ ತಿರುಗಿದೆ, ಇನ್ನೊಮ್ಮೆ, ಮತ್ತೊಮ್ಮೆ.

ಹೊರಟ ಜಾಗಕ್ಕೇ ಬಂದು ನಿಂತೆ. ನನ್ನ ನೆಲೆಯ ಎಲ್ಲೆ ಗುರುತಾದ ನೆಮ್ಮದಿ ನನಗೆ.

●